ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 1 ಚಾ ಸಾ 1

ಹೆಸರುಃ ಲಕ್ಷ್ಮಿ

ಗಂಡನ ಹೆಸರುಃ ಶಂಭು

ವಯಸ್ಸುಃ 28 ವರ್ಷ

ಉದ್ಯೋಗಃ ಬಟ್ಟೆ ವ್ಯಾಪಾರ

ವಾಸಃ ಕೆ.ಆರ್.ಸಾಗರ.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ಚಾ ಸಾ 2 ಗಂಗಾರಾಮ್ ಮತ್ತು ಚಾ ಸಾ 3 ಗಣೇಶ್ ನನ್ನ ಸಹೋದರ ಮಾವಂದಿರು. ಚಾ ಸಾ 4 ಸೀತಾ ನನ್ನ ಅತ್ತೆಯ ಮಗಳು. ನಾನು, ಗಂಗಾರಾಮ್, ಗಣೇಶ್ ಮತ್ತು ಸೀತಾ ಕೆ.ಆರ್. ಎಸ್. ನ ಬಜಾರ್ ಲೈನ್ ನಲ್ಲಿ ವಾಸವಿದ್ದೇವೆ.

2. ಗಂಗಾರಾಮ್ ರವರ ಹೆಂಡತಿಯ ಹೆಸರು ಲಕ್ಷ್ಮಿ. ಗಂಗಾರಾಮ್ ಮತ್ತು ಲಕ್ಷ್ಮಿಗೆ ರಾಜ್, ಕೋಮಲ್ ಮತ್ತು ಕುನಾಲ್

ಎಂಬ ಮೂರು ಜನ ಮಕ್ಕಳಿದ್ದರು.

3. ಗಂಗಾರಾಮ್ ನ ಅಣ್ಣ ಚಾ ಸಾ 3 ಗಣೇಶನು ಗಂಗಾ ಎಂಬಾಕೆಯನ್ನು ಮದುವೆಯಾಗಿರುತ್ತಾನೆ. ಸದರಿ ದಂಪತಿಗಳಿಗೆ ಹೀನಾ, ಕೃಷ್ಣ, ಗೋವಿಂದ ಮತ್ತು ಲಖನ್ ಎಂಬ ನಾಲ್ಕು ಜನ ಮಕ್ಕಳು.

4. ಗಂಗಾರಾಮ್, ಗಣೇಶ್ ಮತ್ತು ನನ್ನ ಗಂಡ ಶಂಭು ಇವರೆಲ್ಲರೂ ಕರ್ನಾಟಕ, ತಮಿಳುನಾಡು, ಆಂಧ್ರ ಮುಂತಾದ ಕಡೆ ಬಟ್ಟೆ ವ್ಯಾಪಾರ, ಪ್ಲಾಸ್ಟಿಕ್ ಹೂಗಳ ವ್ಯಾಪಾರ ಮತ್ತು ಗಾಜಿನ ಸಾಮಾಗ್ರಿಗಳನ್ನು ಮಾರಾಟ ಮಾಡುವ ವ್ಯಾಪಾರವನ್ನು ಮಾಡುತ್ತಿದ್ದರು.

5. ಆ ರೀತಿ ಗಂಗಾರಾಮ್, ಗಣೇಶ್ ಮತ್ತು ಶಂಭು ವ್ಯಾಪಾರಕ್ಕೆಂದು ಹೋದರೆ ತಿಂಗಳಿಗೆ ಒಂದು ಸಲ ಅಥವಾ ಒಂದೂವರೆ ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದರು.

6. ಕೊನೆಯ ಬಾರಿಗೆ ಗಣೇಶ್ ಮತ್ತು ಗಂಗಾ ಮತ್ತು ಅವರ ಇಬ್ಬರು ಮಕ್ಕಳುಗಳಾದ ಕೃಷ್ಣ ಮತ್ತು ಲಕನ್ ಆಂಧ್ರಪ್ರದೇಶಕ್ಕೆ ವ್ಯಾಪಾರಕ್ಕೆ ಹೋಗಿದ್ದರು.

7. ಅವರ ಮಗಳು ಹೀನಾಳಿಗೆ ಮದುವೆಯಾಗಿ ಗಂಡನ ಮನೆಯಲ್ಲಿದ್ದಳು. ಗಣೇಶ್ ಮತ್ತು ಗಂಗಾರವರ ಇನ್ನೊಬ್ಬ ಮಗ ಗೋವಿಂದ, ಆತ ಮೃತ ಲಕ್ಷ್ಮಿಯ ಮನೆಯಲ್ಲಿ ಇದ್ದುಕೊಂಡು

ವಿದ್ಯಾಭ್ಯಾಸ ಮಾಡುತ್ತಿದ್ದ.

8. ನ್ಯಾಯಾಲಯದ ಮುಂದಿರುವ ಆರೋಪಿ ಲಕ್ಷ್ಮಿ ಮತ್ತು ಮೃತ ಲಕ್ಷ್ಮಿ ಸ್ವಂತ ದೊಡ್ಡಮ್ಮ ಚಿಕ್ಕಮ್ಮನ ಮಕ್ಕಳು.

9. ಮೃತ ಲಕ್ಷ್ಮಿಯ ಗಂಡ ಕೊನೆಯದಾಗಿ ದಿಃ 31.02.2022 ರಂದು ಕೆ.ಆರ್. ಎಸ್ ನಿಂದ ವ್ಯಾಪಾರಕ್ಕೆ ಹೋಗಿದ್ದರು. ಆ ಸಂದರ್ಭದಲ್ಲಿ ಆತನ ಮನೆಯಲ್ಲಿ ಆತನ ಹೆಂಡತಿ ಲಕ್ಷ್ಮಿ, ರಾಜ್, ಕೋಮಲ್, ಕುನಾಲ್ ಮತ್ತು ಗೋವಿಂದ ಇದ್ದರು.

10. 5 ನೇ ತಾರೀಕಿನಂದು ರಾತ್ರಿ 8 ರಿಂದ 9 ಗಂಟೆ ಸಮಯದಲ್ಲಿ ಮೃತ ಲಕ್ಷ್ಮಿಯನ್ನು ಮೃತ ಲಕ್ಷ್ಮಿಯ ಮನೆಗೆ ಹೋಗಿ ಮಾತನಾಡಿಸಿರುತ್ತೇನೆ. ಲಕ್ಷ್ಮಿ ಪಾತ್ರೆ ತೊಳೆಯುತ್ತಿದ್ದಳು. ಆಕೆಯ ಚಿಕ್ಕ ಮಗ ಆಟವಾಡುತ್ತಿದ್ದ. ಉಳಿದಿಬ್ಬರು ಮಕ್ಕಳು ಮತ್ತು ಗೋವಿಂದ ಹೋಂ ವರ್ಕ್ ಮಾಡುತ್ತಿದ್ದರು.

11. ಲಕ್ಷ್ಮಿ ಪಾತ್ರೆ ತೊಳೆದ ನಂತರ ಮನೆಯೊಳಗೆ ಹೋದಳು, ನಾನು ಮನೆಗೆ ಹೊರಟು ಬಂದೆ.

12. ಬೆಳಿಗ್ಗೆ 8 ಗಂಟೆಗೆ ಸೀತಾ ಎನ್ನುವವರು ನನ್ನ ಮನೆಗೆ ಬಂದರು. ಆಕೆ ನನ್ನನ್ನು ಉದ್ದೇಶಿಸಿ ಲಕ್ಷ್ಮಿ ದೊಡ್ಡಮ್ಮ ಯಾಕೆ ಎದ್ದಿಲ್ಲ ಎಂದು ನನ್ನನ್ನು ಕೇಳಿದಳು. ಕಾರಣ ಲಕ್ಷ್ಮಿಯ ಮನೆಯ ಬಾಗಿಲಿನ

ಚಿಲಕವನ್ನು ಹೊರಗಿನಿಂದ ಹಾಕಲಾಗಿತ್ತು ಮತ್ತು ಮನೆಯ ಗೇಟ್ ನ ಒಂದು ಬಾಗವನ್ನು ಮುಚ್ಚಿತ್ತು ಮತ್ತು ಒಂದು ಬಾಗ ತೆರೆದಿತ್ತು. ಆಗ ನಾನು ಸೀತಾಳಿಗೆ ಲಕ್ಷ್ಮಿಯ ಮನೆಗೆ ಹೋಗಿ ನೋಡಿಕೊಂಡು ಬಾ ಎಂದು ತಿಳಿಸಿದೆ.

13. ಆ ರೀತಿ ನಾನು ಹೇಳಿದ ನಂತರ ಸೀತಾ ಮೃತ ಲಕ್ಷ್ಮಿಯ ಮನೆಗೆ ಹೋಗಿ ಬಾಗಿಲಿನ ಚಿಲಕವನ್ನು ಹೊರಗಿನಿಂದ ತೆಗೆದಾಗ ಹಾಲ್ ನಲ್ಲಿ ಏನೂ ಇರಲಿಲ್ಲ, ರೂಂ ಗೆ ಪ್ರವೇಶಿಸಿ ನೋಡಿದಾಗ ಬಟ್ಟೆಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿದ್ದವು.

14. ಸೀತಾ ಆ ರೀತಿ ಮನೆಯಲ್ಲಿ ಇದ್ದ ಲಕ್ಷ್ಮಿಯ ಕಾಲನ್ನು ಹಿಡಿದು ಅಲ್ಲಾಡಿಸಿ ಯಾಕೆ ಎದ್ದಿಲ್ಲ ಎಂದಾಗ ಲಕ್ಷ್ಮಿ ಎದ್ದೇಳಲಿಲ್ಲ. ಆಕೆಯ ಮೈ ಮೇಲೆ ಹಾಕಿದ್ದ ಬೆಡ್ ಶೀಟ್ ಅನ್ನು ತೆಗೆದು ನೋಡಿದಾಗ ಲಕ್ಷ್ಮಿಯ ಮುಖದ ಮೇಲೆಲ್ಲಾ ಏಟಾಗಿ ರಕ್ತಗಾಯಗಳಾಗಿದ್ದವು.

15. ಆ ರೀತಿ ಲಕ್ಷ್ಮಿಯ ಮುಖದಲ್ಲೆಲ್ಲಾ ಗಾಯಗಳಾದ್ದರಿಂದ ಸೀತಾ ಕಿರುಚಿಕೊಂಡು ನಮ್ಮ ಮನೆಗೆ ಬಂದಳು.

16. ಆ ರೀತಿ ಬಂದ ಸೀತಾ ಮನೆಯೊಳಗೆ ವಿಚಿತ್ರವಾಗಿದೆ, ದೊಡ್ಡಮ್ಮನಿಗೆ ಏನೋ ಆಗಿದೆ, ಹೋಗುವ ಬಾ ನಡಿ ಎಂದು ನನ್ನನ್ನು

ಕರೆದುಕೊಂಡು ಸೀತಾ ಮತ್ತು ನಾನು ಲಕ್ಷ್ಮಿಯ ಮನೆಗೆ ಹೋದೆವು.

17. ಆ ರೀತಿ ನಾವಿಬ್ಬರೂ ಮನೆಗೆ ಪ್ರವೇಶಿಸಿ ನೋಡಿದಾಗ ರೂಂ ನಲ್ಲಿ ನೆಲಕ್ಕೆ ಚಾಪೆ ಮತ್ತು ಬೆಡ್ ಶೀಟ್ ಹಾಕಿ ಲಕ್ಷ್ಮಿ, ರಾಜ್, ಕೋಮಲ್ ಮತ್ತು ಕುನಾಲ್ ಮಲಗಿದ್ದರು. ಅವರು ಮಲಗಿದ್ದ ಪಕ್ಕದಲ್ಲೇ ಇದ್ದ ಮಂಚದ ಪಕ್ಕದಲ್ಲೇ ಗೋವಿಂದ ಮಲಗಿದ್ದ.

18. ಆ ರೀತಿ ಮಲಗಿದವರ ಮುಖದ ಮೇಲೆ ಬೆಡ್ ಶೀಟ್ ಹಾಕಲಾಗಿತ್ತು.

19. ನಾನು ಹೋಗಿ ಲಕ್ಷ್ಮಿಯ ಕಾಲನ್ನು ಅಲ್ಲಾಡಿಸಿದೆ, ಲಕ್ಷ್ಮಿ ಎದ್ದೇಳಲಿಲ್ಲ.

20. ಆ ರೀತಿ ಮಲಗಿದವರ ಮುಖದ ಮೇಲೆ ಹಾಕಲಾದ ಬೆಡ್ ಶೀಟ್ ಗಳನ್ನು ನಾನು ತೆಗೆದು ನೋಡಿದೆ. ನೆಲದಲ್ಲಿ ಮಲಗಿದ್ದ ಲಕ್ಷ್ಮಿ ಮತ್ತು ಮೂರು ಮಕ್ಕಳ ಮುಖದ ಮೇಲೆಲ್ಲಾ ಗಾಯಗಳಾಗಿದ್ದವು. ಗೋಡೆಗೆಲ್ಲಾ ರಕ್ತ ಚಲ್ಲಿತ್ತು.

21. ಮಂಚದ ಮೇಲೆ ಮಲಗಿದ್ದ ಗೋವಿಂದನ ಮುಖದ ಮೇಲೆ ಹಾಕಿದ್ದ ಬೆಡ್ ಶೀಟ್ ಅನ್ನು ತೆಗೆದು ನೋಡಲಾಗಿ ಆತನ ಮುಖದ ಮೇಲೂ ರಕ್ತ ಗಾಯಗಳಾಗಿದ್ದವು.

22. ಆತ ಮಲಗಿದ್ದ ಜಾಗದಲ್ಲಿ ಗೋಡೆ ಮತ್ತು ಕಿಟಕಿಯಲ್ಲಿ ರಕ್ತ ಚಿಮ್ಮಿತ್ತು.

23. ಆ ರೀತಿ ಮಲಗಿದವರ ಮುಖದ ಮೇಲೆ ಇದ್ದ ಗಾಯಗಳನ್ನು ನೋಡಿದಾಗ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದಿರಬೇಕು ಎಂದು ನಮಗೆ ಅನ್ನಿಸುತ್ತಿತ್ತು.

24. ನಾನು ಮತ್ತು ಸೀತಾ ಮನೆಯಿಂದ ಹೊರಗೆ ಬಂದು ನಮ್ಮ ಸಂಬಂಧಿಕರಿಗೆಲ್ಲಾ ಪೋನ್ ಮಾಡಿದೆವು. ಸುತ್ತಮುತ್ತಲಿನ ಮನೆಯಲ್ಲಿದ್ದ ನಮ್ಮ ಸಂಬಂಧಿಕರೆಲ್ಲರೂ ಲಕ್ಷ್ಮಿಯ ಮನೆಯ ಬಳಿ ಬಂದರು. ಅಲ್ಲಿಗೆ ಪೊಲೀಸರು ಕೂಡ ಬಂದರು.

25. ಘಟನೆಗೆ ಸಂಬಂಧಪಟ್ಟಂತೆ ಲಕ್ಷ್ಮಿಯ ಮನೆಯ ಬಳಿಯೇ ನಾನು ದೂರನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ.

26. ನಾನು ಬೆಳಿಗ್ಗೆ 10-30 – 11 ಗಂಟೆ ಸಮಯಕ್ಕೆ ಪೊಲೀಸರಿಗೆ ಈಗ ನೋಡಿದ ದೂರನ್ನು ಕೊಟ್ಟಿರುತ್ತೇನೆ, ಅದರಲ್ಲಿ ನನ್ನ ರುಜು ಇದೆ.

27. ಸಾಕ್ಷಿಯು ಗುರುತಿಸಿದ ದೂರನ್ನು ನಿ ಪಿ 1 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 1 ಎ ಎಂದು ಗುರುತಿಸಲಾಯಿತು.

28. ನಿ ಪಿ 1 ರಲ್ಲಿರುವ ವಿಷಯಗಳನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ, ಅವರು ಬರವಣಿಗೆ ಮಾಡಿರುತ್ತಾರೆ.

29. ಸ್ಥಳದಲ್ಲಿದ್ದ ಐದು ಶವಗಳನ್ನು ಪೊಲೀಸರು ತಪಾಸಣೆ ಮಾಡಿ ಶವ ಮರಣೋತ್ತರ ಪರೀಕ್ಷೆಗಾಗಿ ಶವಗಳನ್ನು ಮೈಸೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ.

30. ನಾನು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ಸ್ಥಳ ಪರಿಶೀಲನೆ ಮಾಡಿರುತ್ತಾರೆ.

31. ಸ್ಥಳವನ್ನು ಪರಿಶೀಲನೆ ಮಾಡಿದಾಗ ನೆಲದ ಮೇಲೆ ಲಕ್ಷ್ಮಿ , ರಾಜ್, ಕೋಮಲ್ ಮತ್ತು ಕುನಾಲ್ ಅನುಕ್ರಮವಾಗಿ ಗೋಡೆಯ ಕಡೆಗೆ ತಲೆಯಾದಂತೆ ಮಲಗಿದ್ದರು.

32. ಆ ರೀತಿ ಲಕ್ಷ್ಮಿ, ರಾಜ್, ಕೋಮಲ್ ಮತ್ತು ಕುನಾಲ್ ರವರು ಮಲಗಿದ್ದ ಬಳಿ ಗೋಡೆಗಳಿಗೆ ರಕ್ತ ಚಿಮ್ಮಿತ್ತು.

33. ಆ ರೀತಿ ನೆಲದ ಮೇಲೆ ಮಲಗಿದವರು ಚಾಪೆ ಹಾಕಿ ಅದರ ಮೇಲೆ ಬೆಡ್ ಶೀಟ್ ಹಾಕಿ ಮಲಗಿದ್ದರು. ಆ ರೀತಿ ಹಾಕಲಾದ ಚಾಪೆ ಮತ್ತು ಬೆಡ್ ಶೀಟ್ ಗೆ ರಕ್ತದ ಕಲೆಗಳಾಗಿದ್ದವು.

34. ಗೋವಿಂದ ಮಂಚದ ಮೇಲೆ ಮಲಗಿದ್ದ. ಆತ ಮಲಗಿದ್ದ ಜಾಗದಲ್ಲಿ ಗೋಡೆ ಮತ್ತು ಕಿಟಕಿಗಳಿಗೆ ರಕ್ತ ಚಿಮ್ಮಿತ್ತು.

35. ನೆಲದ ಮೇಲೆ ಮಲಗಿದ್ದ ಲಕ್ಷ್ಮಿ, ರಾಜ್ ಮತ್ತು ಕುನಾಲ್ ರವರ ತಲೆಯ ಕೆಳಬಾಗದಲ್ಲಿ ದಿಂಬುಗಳಿದ್ದವು.

36. ಅದೇ ರೀತಿ ಮಂಚದ ಮೇಲೆ ಮಲಗಿದ್ದ ಗೋವಿಂದನ ತಲೆಯ ಕೆಳಗೆ ದಿಂಬಿತ್ತು.

37. ಆ ರೀತಿ ತಲೆಯ ಕೆಳಗೆ ಇಡಲಾದ ದಿಂಬಿನ ಕವರ್ ಗಳಿಗೆ ರಕ್ತದ ಕಲೆಗಳಾಗಿದ್ದವು.

38. ಪೊಲೀಸರು ದಿಂಬಿನ ಕವರ್ ಗಳನ್ನು ವಶಪಡಿಸಿಕೊಂಡರು.

39. ಗೋಡೆಗೆ ಆಗಿದ್ದ ರಕ್ತದ ಕಲೆಗಳನ್ನು ಹತ್ತಿಯಿಂದ ಸಂಗ್ರಹಿಸಿಕೊಂಡರು.

40. ಗೋವಿಂದ ಮಲಗಿದ್ದ ಮಂಚ ಮತ್ತು ಮಂಚದ ಕೆಳಬಾಗದಲ್ಲಿ ರಕ್ತ ಚೆಲ್ಲಿತ್ತು. ಅವುಗಳನ್ನೂ ಕೂಡ ಪೊಲೀಸರು ಸಂಗ್ರಹಿಸಿಕೊಂಡರು.

41. ಲಕ್ಷ್ಮಿಯ ತಲೆಯ ಕೆಳಗೆ ಇದ್ದ ದಿಂಬಿನ ಬಳಿ ಸ್ಯಾಮ್ ಸಂಗ್ ಫೋನ್ ಇತ್ತು.

42. ಸದರಿ ರೂಂ ನ ಬಾಗಿಲಿನ ಬಳಿ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದವು.

43. ಆ ರೀತಿ ಪೊಲೀಸರು ಸ್ಥಳದಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮೊಹರುಮಾಡಿದ 15 ಪ್ಯಾಕೆಟ್ ಗಳನ್ನು ಮಾನ್ಯ ಅಭಿಯೋಜಕರು ಮತ್ತು ಶ್ರೀ ಎಸ್ ಆರ್. ಎಸ್ ವಕೀಲರ ಸಮಕ್ಷಮದಲ್ಲಿ ತೆರೆಯಲಾಯಿತು.)

44. ಆ ರೀತಿ ಲಕ್ಷ್ಮಿ ತಲೆಯ ಕೆಳಗೆ ಇಟ್ಟುಕೊಂಡಿದ್ದ ದಿಂಬಿನ ಕವರ್ ಅನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 1 ಎಂದು ಗುರುತಿಸಲಾಯಿತು.

45. ರಾಜು ತಲೆಯ ಕೆಳಗೆ ಇಟ್ಟುಕೊಂಡಿದ್ದ ದಿಂಬಿನ ಕವರ್ ಅನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 2 ಎಂದು ಗುರುತಿಸಲಾಯಿತು.

46. ಕುನಾಲ್ ತಲೆಯ ಕೆಳಗೆ ಇಟ್ಟುಕೊಂಡಿದ್ದ ದಿಂಬಿನ ಕವರ್ ಆನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 3 ಎಂದು ಗುರುತಿಸಲಾಯಿತು.

47. ಗೋವಿಂದ ತಲೆಯ ಕೆಳಗೆ ಇಟ್ಟುಕೊಂಡಿದ್ದ ದಿಂಬಿನ ಕವರ್ ಅನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 4 ಎಂದು ಗುರುತಿಸಲಾಯಿತು.

48. ಲಕ್ಷ್ಮಿ ಮಲಗಿದ್ದ ನೇರದ ಗೋಡೆಯಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 5 ಎಂದು ಗುರುತಿಸಲಾಯಿತು.

49. ರಾಜು ಮಲಗಿದ್ದ ನೇರದ ಗೋಡೆಯಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 6 ಎಂದು ಗುರುತಿಸಲಾಯಿತು.

50. ಕೋಮಲ್ ಮಲಗಿದ್ದ ನೇರದ ಗೋಡೆಯಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 7 ಎಂದು ಗುರುತಿಸಲಾಯಿತು.

51. ಕುನಾಲ್ ಮಲಗಿದ್ದ ನೇರದ ಗೋಡೆಯಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 8 ಎಂದು ಗುರುತಿಸಲಾಯಿತು.

52. ಗೋವಿಂದ ಮಲಗಿದ್ದ ನೇರದ ಗೋಡೆಯಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 9 ಎಂದು ಗುರುತಿಸಲಾಯಿತು.

53. ಗೋವಿಂದ ಮಲಗಿದ್ದ ಮಂಚದ ಕೆಳಬಾಗದಲ್ಲಿನ ನೆಲದಿಂದ ಸಂಗ್ರಹಿಸಿದ್ದ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 10 ಎಂದು ಗುರುತಿಸಲಾಯಿತು.

54. ಲಕ್ಷ್ಮಿ, ರಾಜ್, ಕೋಮಲ್, ಕುನಾಲ್ ಹಾಸಿಕೊಂಡು ಮಲಗಿದ್ದ ಕೌದಿಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 11 ಎಂದು ಗುರುತಿಸಲಾಯಿತು.

55. ಗೋವಿಂದ ಹಾಸಿಕೊಂಡು ಮಲಗಿದ್ದ ಕೌದಿಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 12 ಎಂದು ಗುರುತಿಸಲಾಯಿತು.

56. ಮಾಸಲು ನೇರಳೆ ಬಣ್ಣದ ರಕ್ತದ ಕಲೆ ಇರುವ ಲಂಗದ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 13 ಎಂದು ಗುರುತಿಸಲಾಯಿತು.

55. ಸ್ವಿಚ್ ಬೋರ್ಡ್ ನಿಂದ ಸಂಗ್ರಹಿಸಿರುವ ರಕ್ತದ ಕಲೆಯ ಹತ್ತಿಯ ಬಟ್ಟೆಯನ್ನು ಈಗ ನೋಡಿದೆ. ಸದರಿ ವಸ್ತುವನ್ನು ಮು. ಮಾಲು 14 ಎಂದು ಗುರುತಿಸಲಾಯಿತು.

56. ಮೃತ ಲಕ್ಷ್ಮಿಗೆ ಸೇರಿದ ಸ್ಯಾಮ್ಸ್‌ಂಗ್ ಕಂಪನಿಯ ಮೊಬೈಲನ್ನು ಈಗ ನೋಡಿದೆ. ಸದರಿ ಮೊಬೈಲನ್ನು ಮು. ಮಾಲು 15 ಎಂದು ಗುರುತಿಸಲಾಯಿತು.

57. ಮು. ಮಾಲು 1 ರಿಂದ 15 ನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

58. ಈಗ ನೋಡಿದ ದಾಖಲೆಯಲ್ಲಿ ನನ್ನ ರುಜು ಇದೆ. ಸಾಕ್ಷಿಯು ಪಂಚನಾಮೆಯನ್ನು ಗುರುತಿಸಿದ್ದು ಈ ದಾಖಲೆಯನ್ನು ನಿ ಪಿ 2 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 2 ಎ ಎಂದು ಗುರುತಿಸಲಾಯಿತು.

59. ಮು. ಮಾಲು 1 ರಿಂದ 15 ವಸ್ತುಗಳನ್ನು ಇಡಲಾಗಿರುವ ಚೀಲಗಳಿಗೆ ಅಂಟಿಸಲಾಗಿರುವ ಚೀಟಿಗಳಲ್ಲಿ ನನ್ನ ರುಜುಗಳು ಇವೆ. ಸದರಿ ಚೀಟಿಗಳನ್ನು ಅನುಕ್ರಮವಾಗಿ ಮು. ಮಾಲು 1ಎ ರಿಂದ ಮು. ಮಾಲು 15ಎ ಮತ್ತು ಈ ಸಾಕ್ಷಿಯ ರುಜುವನ್ನು ಅನುಕ್ರಮವಾಗಿ ಮು. ಮಾಲು 1 ಬಿ ರಿಂದ ಮು. ಮಾಲು 15 ಬಿ ಎಂದು ಗುರುತಿಸಲಾಯಿತು.

60. ಆ ರೀತಿ ಪೊಲೀಸರು ಪರಿಶೀಲನೆ ಮಾಡುವಾಗ ಎಂಟು ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಎಂಟು ಪೋಟೋಗಳನ್ನು ಒಟ್ಟಾಗಿ ನಿ ಪಿ 3 ಎಂದು ಗುರುತಿಸಲಾಯಿತು.

61. ನಿ ಪಿ 3 ರ ಪೋಟೋ ಸಂಖ್ಯೆ 1 ಮತ್ತು 3 ರಲ್ಲಿ ಹಸಿರು ಬಣ್ಣದ ನೈಟಿ ಧರಿಸಿರುವ ಹೆಂಗಸು ನಾನು.

62. ನನ್ನ ಮತ್ತು ಗಂಗಾರಾಮ್ ರವರ ಮನೆ ಕೆ.ಆರ್. ಸಾಗರದ ಬಜಾರ್ ಸ್ಟ್ರೀಟ್ ನಲ್ಲಿ ಅಕ್ಕಪಕ್ಕದಲ್ಲಿವೆ. ಅದೇ ರೀತಿ ಚಾ ಸಾ 4 ಸೀತಾ ರವರ ಮನೆ ನನ್ನ ಮನೆಯ ಹಿಂಬಾಗದ ಬೀದಿಯಲ್ಲಿನ ಐದನೆ ಮನೆ.

63. ಸೀತಾ, ನಾನು ಮತ್ತು ಮೃತ ಲಕ್ಷ್ಮಿ ತುಂಬಾ ಅನ್ಯೋನ್ಯತೆಯಿಂದ ಇದ್ದೆವು.

64. ಲಕ್ಷ್ಮಿ, ರಾಜ್, ಕೋಮಲ್, ಕುನಾಲ್ ಮತ್ತು ಗೋವಿಂದ ರವರ ಕೊಲೆಯಾಗಿದ್ದ ವಿಚಾರವನ್ನು ನಾನು ಪೋನ್ ಮೂಲಕ ಗಂಗಾರಾಮ್ ಮತ್ತು ರಮೇಶ್ ಗೆ ತಿಳಿಸಿರುತ್ತೇನೆ.

65. ನ್ಯಾಯಾಲಯದ ಮುಂದಿರುವ ಆರೋಪಿ ಲಕ್ಷ್ಮಿಯ ಗಂಡ ಕೂಡ ಬಟ್ಟೆಯ ವ್ಯಾಪಾರ ಮಾಡುತ್ತಾರೆ.

66. ಆರೋಪಿ ಲಕ್ಷ್ಮಿಯ ತಾಯಿಯ ಮನೆ ಆಂದ್ರಪ್ರದೇಶದ ಹೈದರಾಬಾದ್ ನಲ್ಲಿದೆ. ಆಕೆ ತನ್ನ ಕುಟುಂಬದ ಜೊತೆಯಲ್ಲಿ ಹುಂಡವಾಡಿಯಲ್ಲಿ ವಾಸವಿದ್ದಳು. ಆನಂತರದಲ್ಲಿ ಆಕೆ ತನ್ನ ಕುಟುಂಬದ

ಜೊತೆಯಲ್ಲಿ ಬೆಲವತ್ತಮಂಟಿಯಲ್ಲಿ ವಾಸವಿದ್ದಳು.

67. ಮೃತ ಲಕ್ಷ್ಮಿಯ ತವರುಮನೆ ಆಂಧ್ರ ಪ್ರದೇಶದ ಹೈದರಾಬಾದ್.

68. ಆನಂತರದಲ್ಲಿ ಎರಡು ದಿವಸಗಳ ನಂತರ ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿದ್ದರು. ಅಲ್ಲಿ ಪೊಲೀಸರು ಇದ್ದರು. ಪೊಲೀಸರು ನಮ್ಮನ್ನು ಆರೋಪಿ ಲಕ್ಷ್ಮಿಯ ಪರಿಚಯದ ಸಂಬಂಧವಾಗಿ ವಿಚಾರಣೆ ಮಾಡಿದರು.

69. ಆ ಸಂದರ್ಭದಲ್ಲಿ ಆರೋಪಿ ಲಕ್ಷ್ಮಿ ಪೊಒಲೀಸ್ ಠಾಣೆಯಲ್ಲಿ ಇದ್ದಳು.

70. ಗಂಗಾರಾಮ್ ಮತ್ತು ಲಕ್ಷ್ಮಿ ಲಕ್ಷ್ಮಿಯ ನಡುವೆ ಅಕ್ರಮ ಸಂಬಂಧ ಇತ್ತು ಎಂದು ಪೊಲೀಸರು ತಿಳಿಸಿದರು. ಗಂಗಾರಾಮ್ ನ ಹೆಂಡತಿ ಲಕ್ಷ್ಮಿ ತನ್ನನ್ನು ಗಂಗಾರಾಮ್ ನ ಹತ್ತಿರ ಬರಲು ಬಿಡುತ್ತಿಲ್ಲ. ಈ ಕಾರಣಕ್ಕಾಗಿ ಲಕ್ಷ್ಮಿಯನ್ನೇ ಮುಗಿಸಿದರೆ ತಾನು ಮತ್ತು ಗಂಗಾರಾಮ್ ಚೆನ್ನಾಗಿರಬಹುದು ಎಂದು ಆರೋಪಿ ಯೋಚನೆ ಮಾಡಿ ದಿಃ 05.02.2022 ರಂದು ರಾತ್ರಿ 9-30 – 10 ಗಂಟೆಗೆ ಕೆ.ಆರ್.ಸಾಗರದಲ್ಲಿರುವ ಗಂಗಾರಾಮ್ ನ ಮನೆಗೆ ಬಂದು ಗಂಗಾರಾಮ್ ನ ಹೆಂಡತಿ ಲಕ್ಷ್ಮಿ ಮತ್ತು ಆರೋಪಿ ಲಕ್ಷ್ಮಿಯ ನಡುವೆ ಮಾತುಕತೆಯಾಗಿತ್ತು.

71. ಲಕ್ಷ್ಮಿ ಏನೋ ವಿರುದ್ದವಾಗಿ ಮಾತನಾಡಿದ ಕಾರಣಕ್ಕಾಗಿ ಆರೋಪಿ ಲಕ್ಷ್ಮಿ ಸುತ್ತಿಗೆಯನ್ನು ತೆಗೆದುಕೊಂಡು ಲಕ್ಷ್ಮಿಯ ತಲೆಗೆ ಹೊಡೆದು ಆನಂತರ ಮಚ್ಚಿನಿಂದ ಹೊಡೆದು ಕೊಲೆ ಮಾಡಿರುತ್ತಾಳೆ.

72. ಶಬ್ದ ಕೇಳಿ ಗೋವಿಂದ ಎದ್ದಾಗ ಗೋವಿಂದನ ತಲೆಗೆ ಮತ್ತು ಮುಖಕ್ಕೆ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾಳೆ.

73. ಆನಂತರ ರಾಜ್ ಎದ್ದಾಗ ರಾಜ್ ನ ತಲೆಗೆ ಮತ್ತು ಮುಖಕ್ಕೆ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾಳೆ.

74. ಆನಂತರ ಕೋಮಲ್ ಎದ್ದಾಗ ಕೋಮಲ್ ನ ತಲೆಗೆ ಮತ್ತು ಮುಖಕ್ಕೆ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾಳೆ.

75. ಆನಂತರ ಕುನಾಲ್ ಎದ್ದಾಗ ಕುನಾಲ್ ನ ತಲೆಗೆ ಮತ್ತು ಮುಖಕ್ಕೆ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾಳೆ.

76. ಆ ರೀತಿ ಐದು ಜನರನ್ನು ಕೊಲೆ ಮಾಡಿದ ನಂತರದಲ್ಲಿ ಆರೋಪಿ ಲಕ್ಷ್ಮಿ ಬೆಳಿಗ್ಗೆ 5 ಗಂಟೆಗೆ ಬಸ್ಸು ಹತ್ತಿ ಬೆಲವತ್ತ ಮಂಟಿಯಲ್ಲಿರುವ ತನ್ನ ಮನೆಗೆ ಹೋಗಿರುತ್ತಾಳೆ.

77. ಆ ರೀತಿ ಕೊಲೆ ಮಾಡಿದ ನಂತರ ಮಚ್ಚನ್ನು ತೆಗೆದುಕೊಂಡು ಹೋಗಿ ಅಂಗಡಿಯವರಿಗೆ ಕೊಟ್ಟಿರುತ್ತಾಳೆ. ಸುತ್ತಿಗೆ ಮತ್ತು ಉಳಿದ ವಸ್ತುಗಳನ್ನು ವರುಣಾ ನಾಲೆಯ ನೀರಿಗೆ ಎಸೆದಿದ್ದಾಳೆ.

78. ಸಿಸಿ ಕ್ಯಾಮೆರಾ ನೋಡಿದ್ದರಿಂದ ಮತ್ತು ತನಿಖೆ ಮಾಡಿದ್ದರಿಂದ ಮೇಲಿನ ವಿಚಾರಗಳೆಲ್ಲವೂ ಪೊಲೀಸರಿಗೆ ಗೊತ್ತಾಗಿ ಆ ವಿಚಾರವನ್ನು ಪೊಲೀಸರು ನಮಗೆ ತಿಳಿಸಿದ್ದಾರೆ.

79. ಪೊಲೀಸರು ಪೊಲೀಸ್ ಠಾಣೆಯಲ್ಲಿದ್ದ ಆರೋಪಿ ಲಕ್ಷ್ಮೀ ತಾನೇ ಐದು ಜನರನ್ನು ಕೊಲೆ ಮಾಡಿರುವುದಾಗಿ ಪೊಲೀಸರಿಗೆ ತಿಳಿಸಿದ್ದನ್ನು ಪೊಲೀಸರು ನಮಗೆ ತಿಳಿಸಿದ್ದಾರೆ.

80. ತಾನು ಮಾಡಿದ ಕೃತ್ಯವನ್ನು ಮಕ್ಕಳು ಬೇರೆಯವರಿಗೆ ತಿಳಿಸಬಹುದು ಎಂದು ಭಾವಿಸಿ ಲಕ್ಷ್ಮೀ ನಾಲ್ಕು ಜನ ಮಕ್ಕಳನ್ನೂ ಕೂಡ ಕೊಲೆ ಮಾಡಿರುತ್ತಾಳೆ.

81. ಆರೋಪಿ ಲಕ್ಷ್ಮಿಯನ್ನು ಕೆಲವು ಕಾರ್ಯಕ್ರಮಗಳಲ್ಲಿ ನೋಡಿರುತ್ತೇನೆ. ಎರಡು ಮೂರು ಸಲ ಗಂಗಾರಾಮ್ ರವರ ಮನೆಗೆ ಬಂದಾಗಲೂ ನೋಡಿರುತ್ತೇನೆ.

**ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಕಲಂ 231(2) ರನ್ವಯ ಸಲ್ಲಿಸಲಾದ ಅರ್ಜಿಯಲ್ಲಿ ಮಾಡಿದ ಆದೇಶಕ್ಕನುಗುಣವಾಗಿ ಮುಂದೂಡಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)